ಮೂಲ ದಾವಾ ಸಂಖ್ಯೆ. 115/2016 ಪಿ ಡಬ್ಲ್ಯೂ 3

(ದಿನಾಂಕ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀಮತಿ ಎ ಎಸ್ ಬಿ ವಕೀಲರಿಂದಃ-

ನಾನು ಈ ದಾವೆಯಲ್ಲಿ 5 ನೇ ವಾದಿ ಇರಬಹುದು. ಸರ್ವೆ ನಂ.104 ರಲ್ಲಿಯೂ ಸಹಾ 1 ನೇ ಪ್ರತಿವಾದಿ ಹಾಕಿರುವ ಪೈಪ್ ಲೈನ್ ಬಂದಿರುತ್ತದೆಂದರೆ ಇರಬಹುದು. ಸರ್ವೆ ನಂ.104 ರಲ್ಲಿ 1 ನೇ ಪ್ರತಿವಾದಿಯು ಮೀನುಗಳನ್ನು ಸಂಗ್ರಹ ಮಾಡಲು ಗುಂಡಿಯನ್ನು ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಅವರು 40 ಎಕರೆ ಒಳಗೆ ಗುಂಡಿ ಮಾಡಿರುತ್ತಾರೆನ್ನುತ್ತಾರೆ. ನನಗೆ ಸೇರಿದ ಯಾವುದೇ ಆಸ್ತಿ ದಾವಾಸ್ತಿ ಬಳಿ ಇಲ್ಲ. ಯಾವ ಯಾವ ಸರ್ವೆ ನಂಬರಿನಲ್ಲಿ ಪೈಪ್ ಲೈನ್ ಹೋಗಿದೆ ಅಂತಾ ನನಗೆ ಹೇಳಲು ಬರುವುದಿಲ್ಲ. ತುಂಗಭದ್ರಾ ನದಿಯಿಂದ ಜಮೀನುಗಳಿಗೆ ಪೈಪ್ ಲೈನ್ ಹಾಕಿಕೊಳ್ಳಬೇಕೆಂದರೆ 3 ನೇ ಪ್ರತಿವಾದಿಯವರಿಂದ ಪರವಾನಿಗೆ ಪಡೆಯಬೇಕೆಂದರೆ ಸರಿ. ಪೈಪ್ ಲೈನ್ ಹಾಕಿರುವ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಮತ್ತು 1 ನೇ ವಾದಿ ಸಂಬಂಧಿಕರಲ್ಲ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ